ಶ್ರೀ ಪಿ. ಜಿ. ಆರ್. ಸಿಂಧ್ಯ,—ಅಧ್ಯಕ್ಷರೆ, ನಾನು ಒಂದು ಸಲಹೆ ಕೊಟ್ಟಿದ್ದೆ ಪಬ್ಲಿಕ್ ಅಂಡರ್ ಟೇಕಿಂಗ್ಸ್‌ನಲ್ಲಿ ಬೇಕಾದಷ್ಟು ರೆಕ್ರೂಟ್‌ಮೆಂಟ್ ಆಗುತ್ತದೆ. ಉದಾಹರಣೆಗೆ ಕೆಮಿಸ್‌ಆರ್‌ಟಿಸಿ.ಯಲ್ಲಿ ರೆಕ್ರೂಟ್‌ಮೆಂಟ್ ಮಾಡುತ್ತಾರೆ.

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೆ, ಮಾನ್ಯ ಸದಸ್ಯರು ವಿಷಯವನ್ನು ಡೈವರ್ಟ್ ಮಾಡುತ್ತಿದ್ದಾರೆ, ಅದು ಬೇಡ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ.—ಈ ಒಂದು ಆಶ್ವಾಸನೆಯ ಮೇರೆಗೆ ಅವರು ಚಳುವಳಿ ನಿಲ್ಲಿಸಿ, ವಾಪಸ್ಸು ಹೋಗುವಂತೆ ಮಾನ್ಯ ಮಂತ್ರಿಗಳು ಹೇಳಬೇಕು.

(ಗೊಂದಲ)

ಅಧ್ಯಕ್ಷರು.—ಈ ವಿಷಯ ಇಲ್ಲಿಗೆ ಮುಕ್ತಾಯವಾಯಿತು, ಮುಂದೆ ಮಾನ್ಯ ಕಾನಡೆಯವರು ತಮ್ಮ ಗಮನ ಸೆಳೆಯುವ ಸೂಚನೆಯ ಬಗ್ಗೆ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯತಕ್ಕದ್ದು.

ವರಾಹಿ ಯೋಜನೆಯ ನಿರ್ಮಾಣ ಕಾಲದಲ್ಲಿ ಕಡಿದ ಮರಗಳ ಮಾರಾಟದಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ

ಶ್ರೀ ಗೋಪಾಲ ಮುಕುಂದ ಕಾನಡೆ.—ಅಧ್ಯಕ್ಷರೆ, ವರಾಹಿ ಯೋಜನೆಯ ನಿರ್ಮಾಣ ಕಾಲದಲ್ಲಿ ಕಡಿದ ಮರಗಳ ಮಾರಾಟದಲ್ಲಿ ಅವ್ಯವಹಾರ ನಡೆದಿರುವ ವಿಷಯದ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತೇವೆ.

ಶ್ರೀ ಜೆ. ಎಸ್. ದೇಶಮುಖ್ —(ಅರಣ್ಯ, ಗಣಿ ಮತ್ತು ಭೂ ವಿಜ್ಞಾನ ಸಚಿವರು) ಅಧ್ಯಕ್ಷರೆ,

ಜಾಗೃತ ಆಯೋಗದ ಶಿಫಾರಸ್ಸಿನ ಮೇಲೆ ಸರ್ಕಾರವು, ಸರ್ಕಾರಕ್ಕೆ ಆದ ನಷ್ಟವನ್ನು ಮತ್ತು ಜವಾಬ್ದಾರಿಯನ್ನು ಪರಿಶೀಲಿಸಿ, ನಿಗಧಿಪಡಿಸಲು ಹೈ ಲೆವಲ್ ಟೀಮನ್ನು ನಿಯಮಿಸಿತು.

ಹೈ ಲೆವೆಲ್ ಟೀಮ್ ಈಗಾಗಲೇ ಬಹಳಷ್ಟು ಪ್ರಗತಿಯನ್ನು ಈ ವಿಷಯದಲ್ಲಿ ಸಾಧಿಸಿ, ಅಂತಿಮ ಘಟ್ಟದಲ್ಲಿದೆ. ಬೇಕಾದ ದಾಖಲೆಗಳು ಪೂರ್ಣವಾಗಿ ದೊರೆಯದಿರುವುದರಿಂದಾಗಿ ಟೀಮಿನ ಕೆಲಸವು ಕಡವಾಗಿದ್ದು, ನಿಗಧಿಪಡಿಸಿದ ಸಮಯದಲ್ಲಿ ತನಿಖೆಯನ್ನು ಸಂಪೂರ್ಣಗೊಳಿಸಲು ಆಗಿರುವುದಿಲ್ಲ. ಸಂಪೂರ್ಣ ವರದಿಯನ್ನು ಸಲ್ಲಿಸಲು ಇನ್ನು ಹೆಚ್ಚಿನ ಸಮಯವನ್ನು ಕೇಳಿರುತ್ತಾರೆ. ಸಮಿತಿಯು ಸುಮಾರು ೨ ತಿಂಗಳ ಅವಧಿಯಲ್ಲಿ ತನಿಖೆಯನ್ನು ಸಂಪೂರ್ಣಗೊಳಿಸಿ, ವರದಿಯನ್ನು ಸಲ್ಲಿಸುವ ಸಂಭವವಿದೆ.

ಹೈ ಲೆವೆಲ್ ಟೀಮಿನ ಸಂಪೂರ್ಣ ವರದಿ ಬಂದಕೂಡಲೇ ಸರ್ಕಾರವು ವರದಿಯನ್ನು ಪರಿಶೀಲಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವುದು.

ಶ್ರೀ ಗೋಪಾಲ ಮುಕುಂದ ಕಾನಡೆ.—ಅಧ್ಯಕ್ಷರೆ, ಈ ಪ್ರಶ್ನೆಯನ್ನು ನಾನು ಕಳುಹಿಸಿದ್ದು ೧೯೮೩ನೇ ಇಸವಿಯಲ್ಲಿ. ೧೯೮೫ನೇ ಇಸವಿಯಲ್ಲಿ ಸಿಕ್ಕಿದೆ. ಇನ್ನು ಯಾವ ತರಹ ವರದಿ ಇವರಿಗೆ ಬೇಕು. ಆಫೀಸರ್ ಲೇಪಾದೇವಿ ಮಾಡಿದ ವರದಿ ಬರಬೇಕೇನು? ಅಧ್ಯಕ್ಷರೆ, ವರದಿ ಇಲ್ಲಿದೆ; ನಾನು ಓದಲೇ. ಈ ತರಹ ಉತ್ತರವನ್ನು ಮಾನ್ಯ ಮಂತ್ರಿಗಳು ಏತಕ್ಕೆ ಹೇಳುತ್ತಾರೆ. ಅಧಿಕಾರಿಗಳನ್ನು ರಕ್ಷಣೆ ಮಾಡಬೇಕೆಂದು ಹೇಳುತ್ತಿದ್ದಾರೋ, ಹೇಗೆ? ೨೦ ಮಂದಿ ಸಿಬ್ಬಂದಿಯನ್ನು ಸಸ್ಪೆಂಡ್ ಮಾಡಬೇಕೆಂದು ಅಲ್ಲಿಗೆ ಕಮಿಟಿಯವರು ಕೂಡ ಹೋಗಿ ನೋಡಿ ತೀರ್ಮಾನ ಮಾಡಿದ್ದಾರೆ. ೪೫ ಲಕ್ಷ ರೂಪಾಯಿ ಅವ್ಯವಹಾರ ನಡೆದಿದೆ. ಅದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳು ಇವೆ. ಟೆಂಡರ್ ಕರೆಯುವುದರಲ್ಲಿಯೂ ಅವ್ಯವಹಾರ ನಡೆದಿದೆ. ಸರ್ಕಾರ ಇದನ್ನೆಲ್ಲಾ ಒಪ್ಪಿಕೊಂಡಿದ್ದರೂ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ಏತಕ್ಕೆ ತೆಗೆದುಕೊಂಡಿಲ್ಲ? ಹರಿಜನ ನೌಕರರು ಎರಡು ರೂಪಾಯಿ ದುರ್ವ್ಯವಹಾರ ಮಾಡಿದ್ದರೂ ಡಿಸ್‌ಮಿಸ್ ಮಾಡುತ್ತೀರಿ. ಕೋಟಿಗಟ್ಟಲೆ ಅವ್ಯವಹಾರ ಮಾಡಿದವರ ಮೇಲೆ ಕ್ರಮ ತೆಗೆದುಕೊಳ್ಳದೆ ಸರ್ಕಾರ ರಕ್ಷಣೆ ಮಾಡುವುದಕ್ಕೆ ಹೊರಟಿದೆಯೇ ಎಂದು ಕೇಳುತ್ತೇನೆ.

ಶ್ರೀ ಜೆ.ಎಸ್. ದೇಶಮುಖ್.—ಪರಿಪೂರ್ಣವಾದ ವರದಿ ಇನ್ನೂ ಬಂದಿಲ್ಲ, ಇನ್ನು ಎರಡು ತಿಂಗಳಲ್ಲಿ ವರದಿ ತರಿಸಿಕೊಂಡು ಯಾವುದೇ ಮುಚ್ಚುಮರೆಯಿಲ್ಲದೆ, ತಪ್ಪಿತಸ್ಥ ಅಧಿಕಾರಿಗಳ ಮೇಲೆ ಆ್ಯಕ್ಷನ್ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ —ಸ್ವಾಮಿ. ಜೇವಿಜಯರವರು ಹೇಳಿಕೆಕೊಟ್ಟಿದ್ದಾರೆ. ಸುಮಾರು ೪೫ ಲಕ್ಷ ರೂಪಾಯಿಂಗಳ ಅವ್ಯವಹಾರ ನಡೆದಿದೆ ಎಂದು.....

ಶ್ರೀ ಬಿ. ಎ. ಜೀವಿಜಯ.—ಮಾನ್ಯ ಅಧ್ಯಕ್ಷರೇ, ವರಾಹಿ ಮುಳುಗಡೆ ಪ್ರದೇಶದಲ್ಲಿ ವಾರ ಕಡಿಯುವುದರಲ್ಲಿ ಆಗಿರತಕ್ಕ ಅವ್ಯವಹಾರದ ವಿಚಾರದಲ್ಲಿ ೧೯೮೫ರಲ್ಲಿ ವಿಜಿಲೆನ್ಸ್ ಕಮೀಷನ್ ವಿಚಾರಣೆ ಮಾಡಿ ವರದಿ ಕೊಡಬೇಕೆಂದು ಸರ್ಕಾರ ಕೇಳಿಕೊಂಡಿತ್ತು, ಅದರಂತೆ ವಿಚಾರಣೆ ಮಾಡಿ ಸರ್ಕಾರಕ್ಕೆ ವರದಿ ಯನ್ನು ಕೊಟ್ಟಿದ್ದಾರೆ. ವರದಿಯ ಪ್ರಕಾರ ಸುಮಾರು ೪೦ ಲಕ್ಷ ರೂಪಾಯಿಂಗಳನ್ನು ಮುಂಗಡವಾಗಿ ಕೊಟ್ಟಿದ್ದಾರೆ. ಇದರಲ್ಲಿ ಅಧಿಕಾರಿಗಳ ಪಾತ್ರ ಕೂಡ ಇದೆಯೆಂದು ವರದಿಯಲ್ಲಿ ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಕಾನೂನಿಗೆ ವಿರುದ್ಧವಾಗಿ ಕೊಟ್ಟಿದ್ದಾರೆಯೇ?

ಶ್ರೀ ಬಿ.ಎ. ಜೀವಿಜಯ.—ಮುಂಗಡವಾಗಿ ಹಣ ಕೊಟ್ಟಿದ್ದಾರೆ. ಸರ್ಕಾರ ಇದರ ಬಗ್ಗೆ ವಿಚಾರಣೆ ಮಾಡಲು ಒಂದು ಉನ್ನತ ಮಟ್ಟದ ಸಮಿತಿಯ ರಚನೆ ಮಾಡಿ, ಯಾರ ಮೇಲೆ ಜವಾಬ್ದಾರಿ ಹೊರಿಸ ಬೇಕು, ಯಾರು ತಪ್ಪಿತಸ್ಥರಿದ್ದಾರೆ. ಯಾವ ಅಧಿಕಾರಿ ತಪ್ಪು ಮಾಡಿದ್ದಾರೆ ಎನ್ನುವ ಬಗ್ಗೆ ವರದಿ ಕೊಡಲು ಸಿಸಿಎಫ್, ಜನರಲ್ ಇರತಕ್ಕ ಸಮಿತಿಯನ್ನು ನೇಮಕ ಮಾಡಲಾಗಿತ್ತು. ಇದರಲ್ಲಿ ಸ್ಪೇಟ್ ಅಕೌಂಟ್ ಜನರಲ್‌ನಿಂದ ೬ ಜನ ಅಧಿಕಾರಿಗಳು, ಪೋಲೀಸ್ ಫಾರೆಸ್ಟ್ ಸೆಕ್ಷನ್‌ನಲ್ಲಿ ಇರತಕ್ಕ ಅಧಿಕಾರಿಗಳ ನ್ನೊಳಗೊಂಡ ಸಮಿತಿಯನ್ನು ಮಾಡಲಾಗಿತ್ತು. ಮಾನ್ಯ ಮುಖ್ಯಮಂತ್ರಿಗಳು ವರದಿಯನ್ನು ಎರಡೂ ತಿಂಗಳೊಳಗೆ ಸಲ್ಲಿಸಬೇಕೆಂದು ಆದೇಶ ಕೊಟ್ಟಿದ್ದರು. ಈಗಾಗಲೇ ೬ ತಿಂಗಳು ಕಳೆದಿದೆ. ನನಗೆ ತಿಳಿದ ಮಟ್ಟಿಗೆ ೧೦೦ಕ್ಕೂ ಹೆಚ್ಚು ವರದಿ ಕೊಟ್ಟಿದ್ದಾರೆ. ಅದರಲ್ಲಿ ಎರಡು ಅಂಶಗಳನ್ನು ಮುಖ್ಯವಾಗಿ ಪ್ರಸ್ತಾಪ ಮಾಡಿದ್ದಾರೆ. ೧೯೮೫ರಲ್ಲಿ ಕಾಡು ಕಡಿದಮೇಲೆ ಗಟ್ಟಿ ಮರಗಳನ್ನು ಡಿಪೋಗಳಿಗೆ ಸಾಗಿಸುವ ಬದಲು, ಕಂಟ್ರಾಕ್ಟ್‌ದಾರರಿಗೆ ಕೊಟ್ಟಿದ್ದಾರೆ. ಮೆದು ಮರಗಳು ಎಲ್ಲಿಗೆ ಹೋಗಬೇಕಾಗಿತ್ತೋ, ಅಲ್ಲಿಗೆ ತಲುಪಿಲ್ಲ. ಈಗ ಮಾನ್ಯ ಮಂತ್ರಿಯವರು ಇನ್ನು ಎರಡು ತಿಂಗಳು ಸಮಯ ಬೇಕೆಂದು ಹೇಳಿದ್ದಾರೆ, ಇಷ್ಟು ಮಾತ್ರ ನಾನು ಹೇಳುವುದಕ್ಕೆ ಇಚ್ಛಿಸುತ್ತೇನೆ.

ಶ್ರೀ ಪಟಮಕ್ಕಿ ರತ್ನಾಕರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಜೀವಿಜಯರವರು ೧೯೮೫ ರಲ್ಲಿ ವಿಜಿಲೆನ್ಸ್‌ಗೆ ಕಳುಹಿಸಿ, ವರದಿ ಕೂಡ ಬಂದಿದೆಯೆಂದು ಹೇಳಿದ್ದಾರೆ. ಇಲ್ಲಿ ೪೦-೪೧ ಲಕ್ಷ ರೂಪಾಯಿ ಗಳ ಹಣ ಲಂಕ್ಷಾನಾಗಿದೆ ಎನ್ನುವುದು ಕೂಡ ವರದಿಯಲ್ಲಿದೆ. ೪೦ ಅಧಿಕಾರಿಗಳು ಕೋಟ್ಯಾಂತರ ರೂಪಾಯಿ ಅವ್ಯವಹಾರದಲ್ಲಿ ಷಾಮೀಲಾಗಿದ್ದಾರೆ ಇದರಲ್ಲಿ ಐ. ಎಫ್. ಎಸ್. ಅಧಿಕಾರಿಗಳು ಇದ್ದಾರೆ ಎನ್ನತಕ್ಕಂಥಾದ್ದು ವರದಿಯಲ್ಲಿ ಇದೆ. ಒಂದೂ ವಿಚಾರವನ್ನು ಜೀವಿಜಯರವರು ಹೇಳಿದರು. ಮೆದು ಮರಗಳನ್ನು ಸರ್ಕಾರದವರು ಖಾಸಗೀಯವರಿಗೆ ಕೊಡುತ್ತಿದ್ದರು. ಇಲ್ಲಿ ಮೆದು ಮರದ ಬದಲಿಗೆ ಕೋಟ್ಯಾಂತರ ರೂಪಾಯಿ ಬೆಲೆ ಬಾಳತಕ್ಕ ಗಟ್ಟಿ ಮರಗಳನ್ನು ಅಧಿಕಾರಿಗಳು ಷಾಮೀಲಾಗಿ ಗುತ್ತಿಗೆ ದಾರರಿಗೆ ಕೊಟ್ಟಿರುವುದರ ಬಗ್ಗೆ ಕೂಡ ಹೇಳಿದ್ದಾರೆ. ಇವತ್ತು ವರದಿ ಸರ್ಕಾರದ ಮುಂದೆ ಇದೆ. ಮಾನ್ಯ ಸಚಿವರಿಗೂ ಕೂಡ ವಿಚಾರ ಗೊತ್ತಿದೆಯೆಂದು ಭಾವಿಸುತ್ತೇನೆ. ರಾಜಕಾರಣಿಗಳಿಗೆ ಸಮಸ್ಯೆಯೇ ಆಹಾರ, ಆ ಸಮಸ್ಯೆಗಳಿಗೆ ಸಾರ್ವಜನಿಕರ ಮಹತ್ವ ಇರುತ್ತದೆ. ವರದಿಯನ್ನು ಮಾನ್ಯ ಸಚಿವರು ಏತಕ್ಕೆ ಗಮನಿಸಿಲ್ಲ. ಸರ್ಕಾರದ ಮುಂದೆ ಇದು ಏತಕ್ಕೆ ಕೊಳೆಯುತ್ತಿದೆ ? ವರದಿಯನ್ನು ಮುಚ್ಚಿ ಹಾಕತಕ್ಕ ಪ್ರಯತ್ನ ಏನಾದರೂ ನಡೆಯುತ್ತಿದೆಯೆ ? ಕೋಟ್ಯಾಂತರ ರೂಪಾಯಿಗಳ ನಷ್ಟಕ್ಕೆ ಕಾರಣ ವಾಗಿರತಕ್ಕ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಏತಕ್ಕೆ ಇದುವರೆವಿಗೂ ಆಗಿಲ್ಲ ? ಈ ಎಲ್ಲಾ ಮಾಹಿತಿಗಳನ್ನು ತಿಳಿದುಕೊಳ್ಳಬೇಕಾದರೆ, ವರದಿಯನ್ನು ಸಭೆಯ ಮುಂದೆ ಪಂಡಿಸಿದರೆ, ಅನುಕೂಲವಾಗುತ್ತದೆ ಸುಮಾರು ೧೬ ಸಹಸ್ರ ಹೆಕ್ಟೇರ್ ಕಾಡನ್ನು ಕಡಿದಿದ್ದಾರೆ. ಸುಮಾರು ೨೦-೨೫ ಕೋಟಿ ರೂಪಾಯಿ ಬೆಲೆ ಬಾಳತಕ್ಕ ಕಾಡು ಹಾಳಾಗಿದೆ, ಒಬ್ಬೊಬ್ಬ ಅಧಿಕಾರಿ ಕನಿಷ್ಟ ೫೦ ಲಕ್ಷ ರೂಪಾಯಿ ಕಡಿಮೆ ಇಲ್ಲದಂತೆ ಸಂಪಾದನೆ ಮಾಡಿದ್ದಾರೆ. ತಪ್ಪಿತಸ್ಥರ ಮೇಲೆ ಕ್ರಮ ತೆಗೆದು ಕೊಳ್ಳುವುದಕ್ಕೆ ಸರ್ಕಾರಕ್ಕೆ ಏನಾಗಿದೆ ? ಮಂತ್ರಿಗಳಿಗೆ ಏನಾಗಿದೆ ? ಏತಕ್ಕೋಸ್ಕರ ಮುಚ್ಚಿಡುತ್ತಿದ್ದಾರೆ.

ಅಧ್ಯಕ್ಷರು.—ಹೈಲೆವಲ್ ಕಮಿಟಿಯಲ್ಲಿ ಪೆಂಡಿಂಗ್ ಇದೆ. ಅವರಿಂದ ವರದಿ ಬಂದ ಕೂಡಲೇ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ.

ಶ್ರೀ ಗೋಪಾಲ ಎಂ. ಕಾನಡೆ.—ಅಲ್ಲಿಗೆ ಬಂದ ಫೈಲು ನಮ್ಮ ಹತ್ತಿರ ಇದೆ.

ಅಧ್ಯಕ್ಷರು.—ಆದಷ್ಟು ಬೇಗ ವರದಿ ತರಿಸಿಕೊಳ್ಳಿ ಎಂದು ನೀವು ಹೇಳಿ, ನಾನು ಹೇಳುತ್ತೇನೆ.

ಶ್ರೀ ಗೋಪಾಲ ಎಂ. ಕಾನಡೆ.—ಆ ಅಧಿಕಾರಿಗಳನ್ನು ಸಸ್ಪೆಂಡ್ ಮಾಡದೇ ಇರುವುದಕ್ಕೆ ಕಾರಣ ಏನು ? ಕಂಟ್ರಾಕ್ಟರುಗಳನ್ನು ಕಪ್ಪುಪಟ್ಟಿಯಲ್ಲಿ ಸೇರಿಸುತ್ತೇವೆಂದು ಹೇಳಿದ್ದೀರಿ. ಇನ್ನೂ ಏತಕ್ಕೆ ಸೇರಿಸಿಲ್ಲ ?

ಅಧ್ಯಕ್ಷರು.—ಪ್ರೈಮಾಫೇಸಿ ಆಗಿ ಅಧಿಕಾರಿಗಳು ತಪ್ಪು ಮಾಡಿದ್ದಾರೆಂದು ಕಂಡು ಬಂದರೆ, ಸಸ್ಪೆಂಡ್ ಮಾಡಿ.

ಶ್ರೀ ಜಿ. ಎಸ್. ದೇಶಮುಖ್.—ಮಾನ್ಯ ಅಧ್ಯಕ್ಷರೇ. ಹೈ ಲೆವೆಲ್ ಕಮಿಟಿಯ ವರದಿಯನ್ನು ಮುಚ್ಚಿಡುವುದಿಲ್ಲ. ಕಂಟ್ರಾಕ್ಟ್‌ದಾರರೊಂದಿಗೆ ಶಾಮೀಲಾಗಿ ಸರ್ಕಾರಕ್ಕೆ ನಷ್ಟ ಉಂಟು ಮಾಡಿರತಕ್ಕ ಅಧಿಕಾರಿಗಳ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳುತ್ತೇನೆ. ಅದಕ್ಕೆ ಇನ್ನು ಎರಡು ತಿಂಗಳು ಟೈಮ್ ಬೇಕಾಗುತ್ತದೆಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರು ಸ್ಪಷ್ಟವಾದಂಥ ಎರಡು ಪ್ರಶ್ನೆಗಳನ್ನು ಕೇಳಿದ್ದರು. ಮಾನ್ಯ ಜೀವಿಜಯರವರು ಕೊಟ್ಟಂತಹ ಹೇಳಿಕೆ ಎಲ್ಲ ಪತ್ರಿಕೆಗಳಲ್ಲಿಯೂ ಬಂದಿದೆ. ವಾರಾಹಿ ಯೋಜನೆಯನ್ನು ಕಟ್ಟಬೇಕಾದರೆ ಸುಮಾರು ೧೮,೮೦೦ ಎಕರೆ ಅರಣ್ಯ ಪ್ರದೇಶ ನಾಶವಾಗಿದೆ ಅರಣ್ಯದಲ್ಲಿದ್ದಂತಹ ಮರಗಳನ್ನು ಕಡಿದು ಸಾಗಾಣಿಕೆ ಮಾಡುವುದರಲ್ಲಿ ಕೋಟ್ಯಾಂತರ ರೂಪಾಯಿ ಹಾಳಾಗಿದೆ. ಕಾಂಟ್ರಾಕ್ಟ್ ಕೆಲಸವನ್ನು ಯಾರು ಯಾರಿಗೆ ವಹಿಸಿದ್ದರೋ ಅವರೂ ಮತ್ತು ಅಧಿಕಾರಿಗಳ ಶಾಮೀಲಿನಿಂದ ಸರ್ಕಾರದ ಬೊಕ್ಕಸಕ್ಕೆ ಕೋಟಿಗಟ್ಟಲೆ ಹಣ ವಂಚಿತವಾಗಿದೆ. ಅಂತಹ ಕಂಟ್ರಾಕ್ಟ್‌ದಾರರನ್ನು ಕಪ್ಪು ಪಟ್ಟಿಯಲ್ಲಿ ಸೇರಿಸುತ್ತೇವೆಂದು ಹೇಳಿದ್ದರೂ ಸರ್ಕಾರ ಇದುವರೆಗೆ ಸೇರಿಸಿಲ್ಲ ಐ.ಎಫ್.ಎಸ್. ಅಧಿಕಾರಿಗಳು ಸೇರಿ ಸುಮಾರು ಇಪ್ಪತ್ತು ಮಂದಿ ಸಿಬ್ಬಂದಿಯವರು ಈ ಒಂದು ಅವ್ಯವಹಾರದಲ್ಲಿ ಭಾಗಿಯಾಗಿದ್ದಾರೆ. ಈ ವಿಚಾರವನ್ನು ಮಾನ್ಯ ಮುಖ್ಯ ಮಂತ್ರಿಗಳ ಜೊತೆ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗಿತ್ತೆಂದು ಮಾನ್ಯ ಸಚಿವರೂ ಕೂಡ ಹೇಳಿದ್ದಾರೆ. ಒಂದು ವರ್ಷ ಕಳೆದರೂ ಯಾವುದೇ ಕ್ರಮವನ್ನು ಸರ್ಕಾರ ತೆಗೆದುಕೊಂಡಿಲ್ಲ. ಮೇಲು ನೋಟಕ್ಕೆ ಅಧಿಕಾರಿಗಳು ತಪ್ಪಿತಸ್ಥರು ಎಂದು ಕಂಡು ಬಂದಿರುವಾಗ ಅವರನ್ನು ಸಸ್‌ಪೆನ್‌ಷನ್‌ನಲ್ಲಿಡತಕ್ಕ ಕ್ರಮ ಏತಕ್ಕೆ ತೆಗೆದುಕೊಳ್ಳಲಿಲ್ಲ.

ಅಧ್ಯಕ್ಷರು.—ಅಧಿಕಾರಿಗಳು ಪ್ರೈಮಾಫೇಸಿಯಾಗಿ ತಪ್ಪು ಮಾಡಿದ್ದಾರೆ ಎಂದು ಕಂಡು ಬಂದರೆ ಸಸ್ಪೆಂಡ್ ಮಾಡಿ.

ಶ್ರೀ ಜಿ. ಎಸ್. ದೇಶಮುಖ್ (ಅರಣ್ಯ ಮಂತ್ರಿಗಳು).—ಈಗಾಗಲೇ ನಾನು ಹೇಳಿದ ಹಾಗೆ ಈಗ ಇಂಟರಿಮ್ ರಿಪೋರ್ಟ್ ಬಂದಿದೆ. ಪೂರ್ಣ ರಿಪೋರ್ಟ್ ಬಂದ ಮೇಲೆ ಯಾರು ತಪ್ಪಿತಸ್ಥರೋ ನೋಡೋಣ.

ಶ್ರೀ ಎಸ್. ಬಂಗಾರಪ್ಪ.—ಪ್ರಶ್ನೆ ಕೇಳಬೇಕೆಂಬ ಆಸೆಯೇನೂ ನನಗಿಲ್ಲ. ಶ್ರೀ ಜೀವಿಜಯ ಅವರು ಹಿಂದಿನ ಮಂತ್ರಿಗಳು, ಇಲ್ಲಿದ್ದಾರೆ.

ಶ್ರೀ ವಿ. ಲಕ್ಷ್ಮೀಸಾಗರ್.—ಶ್ರೀ ಜೀವಿಜಯ ಅವರು ಹೇಳಿರುವುದನ್ನು ಸರಿಯಾಗಿ ತಾವು ಗಮನಿಸಿದ್ದೀರ ಆದರೆ ಮಾನ್ಯ ಮಂತ್ರಿಗಳು ಹೇಳುವ ಉತ್ತರ ಸಮರ್ಪಕವೆನಿಸುತ್ತಿತ್ತು. ಈಗ ವಿಜಿಲೆನ್ಸ್ ಕಮೀಷನ್ ರಿಪೋರ್ಟ್ ಬಂದಿದೆ, ಅದರ ಆಧಾರದ್ಮೇಲೆ ಒಂದು ಹೈಲೆವೆಲ್ ಕಮಿಟಿ ಮಾಡಿದ್ದಾರೆ. ಆ ವರದಿ ಬಂದ ಮೇಲೆ ತಪ್ಪಿತಸ್ಥರು ಯಾರು ಎಂಬುದು ಗೊತ್ತಾಗುತ್ತದೆ. ವರದಿ ಬರಲು ಇನ್ನೂ ಎರಡು ತಿಂಗಳು ಬೇಕು. ಮುಚ್ಚಿಡುವುದಾಗಲೀ ರಕ್ಷಿಸುವುದಾಗಲೀ ಅವಶ್ಯಕವಲ್ಲ.

ಶ್ರೀ ಜೆ. ಹೆಚ್. ಪಟೇಲ್ (ವಿದ್ಯುತ್ ಮಂತ್ರಿಗಳು).—ಅಧ್ಯಕ್ಷರೇ, ಒಂದು ಕಾನೂನಿನ ಪ್ರಶ್ನೆ ಇಲ್ಲಿ ಇದೆ. ಶ್ರೀ ಕಾನಡೆಯವರು ಒಂದು ಫೈಲ್ ತೋರಿಸಿ ಇಡೀ ಫೈಲ್ ಸನ್ನ ಪತ್ರಿರ ಇದೆ ಎಂದರು. ಅವರ ಬಳಿ ಹೇಗೆ ಬಂತು ?

ಶ್ರೀ ಎಸ್. ಬಂಗಾರಪ್ಪ.—ಅವರು ಹೇಳಿದ್ದು ನಕಲಿ ಫೈಲು ಎಂದು.

ಶ್ರೀ ಜೆ. ಹೆಚ್ ಪಟೇಲ್.—ಅಲ್ಲ ಅವರು ಹೇಳಿದ್ದು ಫೈಲಿದೆ ಅಂತ.

ಶ್ರೀ ಗೋಪಾಲ ಎಂ. ಕಾನಡೆ.—ಇದು ಕಾನಡೆ ಫೈಲು ಎಂದು ಹೇಳಿದ್ದು.

ಶ್ರೀ ಎಸ್. ಬಂಗಾರಪ್ಪ.—ವಿಜಿಲೆನ್ಸ್ ಕಮೀಷನ್ ರಿಪೋರ್ಟ್ ಬಂದು ಬಹಳ ತಿಂಗಳಾಗಿವೆ. ಅದರ ಪ್ರಕಾರ ಅಧಿಕಾರಿಗಳನ್ನು ಏಕೆ ಸಸ್ಪೆಂಡ್ ಮಾಡಿಲ್ಲ ?

ಶ್ರೀ ಎ. ಲಕ್ಷ್ಮೀಸಾಗರ್.—ಜೇವಿಜಯ ಅವರು ಹೇಳಿದ್ದಕ್ಕೂ ನಾನು ಹೇಳಿದ್ದಕ್ಕೂ ಏನೂ ವ್ಯತ್ಯಾಸ ಇಲ್ಲ, ಅಲ್ಲಿ ಅವ್ಯವಹಾರ ನಡೆದಿದೆ ಎಂದು ವಿಜಿಲೆನ್ಸ್ ಕಮೀಷನ್ ಅವರು ವರದಿ ಕೊಟ್ಟಿದ್ದಾರೆ. ಅದನ್ನು ಹೈಲೆವಲ್ ಕಮಿಟಿಗೆ ರೆಫರ್ ಮಾಡಿ ಯಾರು ತಪ್ಪು ಮಾಡಿದ್ದಾರೆ ಎಂದು ಪತ್ತೆ ಹಚ್ಚಿ ಇಂಡಿವಿಜಲ್ಲಾಗಿ ಕ್ರಮ ತೆಗೆದುಕೊಳ್ಳುವಂತೆ ಅದರಲ್ಲಿ ಸೂಚಿಸಲಾಗಿದೆ. ಅದರಂತೆ ಹೊಣೆಗಾರಿಕೆಯನ್ನು ನಿರ್ಧಾರ ಮಾಡುವುದಕ್ಕೋಸ್ಕರ ರಚಿಸಲಾಗಿರುವ ಹೈಲೆವೆಲ್ ಕಮಿಟಿ ವರದಿ ಇನ್ನೂ ಬಂದಿಲ್ಲ. ಅದು ಬರುವವರೆಗೂ ಯಾರು ತಪ್ಪಿತಸ್ಥರು, ಯಾರು ನಿರ್ದೋಷಿಗಳು ಎಂದು ಗೊತ್ತಾಗುವುದಿಲ್ಲ. ಆ ವರದಿ ಬಂದ ಮೇಲೆ ಪೈ ಮಾಫೇಸಿ ವಿಚಾರ ಗೊತ್ತಾಗಿ ಯಾವ ಮುಲಾಜೂ ಇಲ್ಲದೆ ಕ್ರಮ ಕೈಗೊಳ್ಳುವುದಾಗಿ ಮಂತ್ರಿಗಳು ತಿಳಿಸಿರುವುದು.

ಶ್ರೀ ಎಸ್. ಬಂಗಾರಪ್ಪ —ಒಬ್ಬೊಬ್ಬ ಅಧಿಕಾರಿ ಎಷ್ಟೆಷ್ಟು ತಪ್ಪು ಮಾಡಿದ್ದಾನೆ ಎಂಬುದರ ಮೇಲೆ ಅವನನ್ನು ಡಿಸ್‌ಮಿಸ್ ಮಾಡಬೇಕೋ ಸಸ್ಪೆಂಡ್ ಮಾಡಬೇಕೋ ಎಂಬುದು ಬರುವ ಪ್ರಶ್ನೆ. ಆದರೆ ಪೈ ಮಾಫೇಸಿ ಅಪರಾಧವಾಗಿರುವುದು ಇರುವಾಗ ಏಕೆ ಸಸ್ಪೆಂಡ್ ಮಾಡುತ್ತಿಲ್ಲ. ಪೈ ಮಾಫೇಸಿ ಇರುವುದು ಗೊತ್ತಾಗಿದೆಯಲ್ಲ.

ಶ್ರೀ ಬಿ. ಎ. ಜೀವಿಜಯ.—ಇದನ್ನು ಬಚ್ಚಿಡುವುದಕ್ಕೆ ಸಾಧ್ಯವಿಲ್ಲ. ಮುಖ್ಯ ಮಂತ್ರಿಗಳು ಕೂಡ ಫೈಲ್ ಮೇಲೆ ವಿಚಾರ ಮಾಡಿಸಿ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಜವಾಬ್ದಾರಿ ಹೊರಿಸಿ ಆಕ್ಷನ್ ತೆಗೆದುಕೊಳ್ಳಬೇಕೆಂದು ಬರೆದಿದ್ದಾರೆ. ಆದರೆ ಈಗ ಬಂದಿರುವ ಇಂಟರಿಮ್ ರಿಪೋರ್ಟ್‌ನಲ್ಲಿ ಯಾರ ಮೇಲೂ ಹೊಣೆಗಾರಿಕೆಯನ್ನು ಹೊರಿಸದಿರುವುದರಿಂದ ಫೈನಲ್ ರಿಪೋರ್ಟ್ ಬರುವವರೆಗೂ ಕಾಯಬೇಕಷ್ಟೇ

SRI S. BANGARAPPA.—Chief Minister has passed the order directing the concerned Minister to take action against the officials. Why the Government has not taken action so far inspite of the order of the Chief Minister.

(ಗೊಂದಲ)

ಅಧ್ಯಕ್ಷರು.—ಈಗ ಇದನ್ನೇ ಬೆಳೆಸುವುದು ಬೇಡ. ಪೈ ಮಾಫೇಸಿ ಇದ್ದರೆ ಕ್ರಮ ಕೈಗೊಳ್ಳುವುದಾಗಿ ಮಂತ್ರಿಗಳು ಹೇಳಿದ್ದಾರೆ. ಇಷ್ಟು ಸಾಕು. ಇನ್ನು ಶ್ರೀ ಕುಶಾಲ ಅವರು ತಮ್ಮದನ್ನು ಕೇಳಲಿ.

ಶ್ರೀ ಎಸ್. ಬಂಗಾರಪ್ಪ.—ಇದು ಏನು ತೋರಿಸುತ್ತದೆ ಎಂದರೆ ಸರ್ಕಾರ ಅವ್ಯವಹಾರವನ್ನು ಪೂರ್ತಿ ಮುಚ್ಚಿ ಹಾಕಬೇಕೆಂದಿದೆ ಎಂಬುದನ್ನು ತೋರುತ್ತದೆ.

(ಗೊಂದಲ)

ಅಧ್ಯಕ್ಷರು.—ಈ ಸದನ ನಡೆಸುವಲ್ಲಿ ನೀವೆಲ್ಲ ಕೈಗೂಡಿಸಲಿಲ್ಲ ಎಂಬುವುದು ಸರಿಯಾಗುವುದಿಲ್ಲ. ಶ್ರೀ ಕುಶಾಲ ಅವರು ಕೇಳದಿದ್ದರೆ ಬೇರೆಯವರನ್ನು ಕರೆಯುತ್ತೇನೆ.

(ಗೊಂದಲ)

ಅಧ್ಯಕ್ಷರು.—ಬಂಗಾರಪ್ಪನವರೇ, ನಿಮ್ಮವರನ್ನೆಲ್ಲ ಕೂರಿಸಿರಿ. ಕೊಟ್ಟ ಅವಕಾಶವನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ನೀವುಗಳೆಲ್ಲ ಹೀಗೆ ಮಾತನಾಡುವುದಾದರೆ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ಬೇರೆ ಯಾರು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ರತ್ನಾಕರ್ ರವರು ಮಾನಾಡಿದುದು ಸಹ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಎಸ್ ಬಂಗಾರಪ್ಪ.— ನಮ್ಮವರನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಎನ್ನುವರಲ್ಲ, ಈ ಸರ್ಕಾರದವರು ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳದೆ ಕರ್ತವ್ಯಚ್ಯುತಿ ಮಾಡಿದ್ದಾರಲ್ಲ ಇದಕ್ಕೇನು ಹೇಳುತ್ತೀರಿ ?

೩–೩೦ ಪಿ. ಎಂ.

Mr. Speaker.— Nothing will be recorded.

ಶ್ರೀ ಎಸ್. ಆರ್. ಬೊಮ್ಮಾಯಿ — ಮಾನ್ಯ ಬಂಗಾರಪ್ಪನವರು ಮಾನ್ಯ ಮುಖ್ಯಮಂತ್ರಿಗಳು ಮತ್ತು ಕಾನೂನು ಮಂತ್ರಿಗಳು ಕೊಟ್ಟ ಉತ್ತರವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಿಲ್ಲವೆಂದು ನನಗನಿಸುತ್ತದೆ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.— ೧೯೭೨ ಹೇಳಿರತಕ್ಕ ವಿಚಾರಣೆಲ್ಲಿ ವಿಜಿಲೆನ್ಸ್‌ನಿಂದ ರಿಪೋರ್ಟ್ ಬಂದಿದೆ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.— ಅವ್ಯವಹಾರ ಆಗಿದೆ ಎನ್ನುವ ರಿಪೋರ್ಟ್ ಇದೆ. ಸರ್ಕಾರ ಕೂಡ ಅವ್ಯವಹಾರ ಆಗಿದೆ ಎನ್ನುವುದನ್ನು ಪರಿಗಣಿಸಿದೆ.

ಶ್ರೀ ಗೋಪಾಲ ಎ. ಕಾನಡೆ.— ಹಾಗಾದರೆ ಅಂತವರಿಗೆ ಏತಕ್ಕೆ ಪ್ರಮೋಷನ್ ಕೊಟ್ಟಿದ್ದೀರಿ ?

ಅಧ್ಯಕ್ಷರು.— ತಾಳ್ಮೆ ಕೂಡಿ.

ಶ್ರೀ ಎಸ್. ಆರ್ ಬೊಮ್ಮಾಯಿ — ಕಾನೂನು ಮಂತ್ರಿಗಳು ವಿವರವಾಗಿ ಹೇಳಿದರು. ಡಿಸ್‌ಮಿಸ್ ಮಾಡಬೇಕಾದರೆ, ಸಸ್ಪೆಂಡ್ ಮಾಡಬೇಕಾದರೆ ಕೆಲವು ನಿಯಮಗಳಿವೆ. ಅವ್ಯವಹಾರ ನಡೆದಿದೆ, ಅನೇಕ ಅಧಿಕಾರಿಗಳು ಬಂದಿದ್ದಾರೆ, ಹೋಗಿದ್ದಾರೆ. ಇದು ಇವತ್ತು ನಡೆದಂತಹ ವಿಷಯ ಅಲ್ಲ, ನಾಲ್ಕಾರು ವರ್ಷಗಳಿಂದ ನಡೆದಂತಹ ವ್ಯವಹಾರ. ಆದರಲ್ಲಿ ಅನೇಕ ಅಧಿಕಾರಿಗಳು ಬಂದಿದ್ದಾರೆ ಅವ್ಯವಹಾರ ಯಾರ ಕಾಲದಲ್ಲಿ ಆಯಿತು, ಯಾರು ತಪ್ಪು ಮಾಡಿದ್ದಾರೆ ಎನ್ನುವುದು ವಿಜಿಲೆನ್ಸ್ ರಿಪೋರ್ಟಿನಲ್ಲಿ ನಿರ್ದಿಷ್ಟವಾಗಿಲ್ಲ. ಹೈ ಪವರ್ ಕಮಿಟಿ ಪ್ರಕಾರ ಇಬ್ಬರು ಅಧಿಕಾರಿಗಳು ತಪ್ಪು ಮಾಡಿದ್ದಾರೆ. Individual responsibility will have to be fixed before you suspend a man. ಆರು ವರ್ಷಗಳಲ್ಲಿ ೧೨ ಜನ ಅಧಿಕಾರಿಗಳು ಇದ್ದರು ಯಾರ ಕಾಲಕ್ಕೆ ಅವ್ಯವಹಾರ ಆಯಿತು, ಯಾರು ತಪ್ಪಿತಸ್ಥರು ಅದನ್ನು ಗುರುತಿಸಿ ಅವರ ಮೇಲೆ ಉಗ್ರಕ್ರಮ ತೆಗೆದುಕೊಳ್ಳುವುದಕ್ಕೆ ಈಗಾಗಲೇ ಸರ್ಕಾರ ನಿರ್ಣಯ ಮಾಡಿದೆ. ೨೦ ಜನ ಅಧಿಕಾರಿಗಳು ಇದ್ದರೂ ಅವರಲ್ಲಿ ಇಬ್ಬರು ತಪ್ಪು ಮಾಡಿರಬಹುದು. During whose period it happened, and who is responsible for it. ಯಾವುದೇ ಕ್ರಮ ತೆಗೆದುಕೊಳ್ಳಬೇಕಾದರೂ ಕಾನೂನು ಪ್ರಕಾರ ಮಾಡಬೇಕಾಗುತ್ತದೆ. ಆಮೇಲೆ ಸಸ್ಪೆಂಡ್ ಮಾಡಬೇಕಾಗುತ್ತದೆ. ಫೈನಲ್ ರಿಪೋರ್ಟ್ ಇನ್ನು ಎರಡು ತಿಂಗಳುಗಳಲ್ಲಿ ಬರಬಹುದು. ಇದು ಕಾನೂನಿನ ಪ್ರಶ್ನೆ.

ಶ್ರೀ ಪಟವಾಕ್ಕೆ ರತ್ನಾಕರ್.— ಉನ್ನತ ಅಧಿಕಾರಿಗಳ ಸಮಿತಿ ವರದಿ ಬಂದಿದೆ. ವಿಜಿಲೆನ್ಸ್ ರಿಪೋರ್ಟ್‌ನಲ್ಲಿ ತಪ್ಪಿತಸ್ಥರು ಎಂದು ಕಂಡುಬಂದಮೇಲೆ ಅಂತಹವರಿಗೆ ಪ್ರಮೋಷನ್ ಏತಕ್ಕೆ ಕೊಡಲಾಗಿದೆ ?

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಬೊಮ್ಮಾಯಿಯವರು ಒಂದು ಮಾತು ಹೇಳಿದರು, ಅವರು ಹೇಳಿದ್ದು ಏನೆಂದರೆ ಮೊದಲು ಒಂದು ರಿಪೋರ್ಟ್ ಬಂದಿದೆ ಎಂದು ಹೇಳಿದ್ದಾರೆ. ಆ ರಿಪೋರ್ಟ್‌ನಲ್ಲಿ ತಪ್ಪು ತಸ್ಥರು ಇದ್ದಾರೆಂದು ಒಪ್ಪಿಕೊಳ್ಳುತ್ತಾರೆ.

ಅಧ್ಯಕ್ಷರು.— ತಾವು ಸೀನಿಯರ್ ಮೋಸ್ಟ್ ಮೆಂಬರ್ ಇದ್ದೀರಿ. ನಿಮ್ಮನ್ನು ಶಾಲೆಗೆ ಕಳುಹಿಸ ಬೇಕಾಗುತ್ತದೆ. ರೆಕಾರ್ಡ್ ಮಾಡಬೇಡಿಯೆಂದು ಹೇಳಬೇಕಾಗುತ್ತದೆ. ಆ ವಿಷಯ ಕ್ಲೋಸ್ ಮಾಡಿ ಆಗಿದೆ. ನಾನು ರೂಲಿಂಗ್ ಕೊಟ್ಟಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.— ನೀವು ನಮ್ಮ ಸಹಾಯಕ್ಕೆ ಬರದಿದ್ದರೆ ಹೇಗೆ ?

ಅಧ್ಯಕ್ಷರು.— ತಾವು ಕೂಡಿ. ಈಗ ಮಾನ್ಯ ಕುಶಾಲರವರೇ ಮಂತ್ರಿಗಳ ಗಮನ ಸೆಳೆಯಿರಿ.

(i) ಸುಳ್ಯದಲ್ಲಿರತಕ್ಕ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿರತಕ್ಕ ನ್ಯೂನ್ಯತೆಗಳ ಬಗ್ಗೆ.

ಶ್ರೀ ಕೆ. ಕುಶಾಲ.— ಮಾನ್ಯ ಅಧ್ಯಕ್ಷರೇ, ಸುಳ್ಯದಲ್ಲಿರತಕ್ಕ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿರ ತಕ್ಕ ನ್ಯೂನ್ಯತೆಗಳ ಬಗ್ಗೆ ಮಾನ್ಯ ಮಂತ್ರಿಗಳವರ ಗಮನಕ್ಕೆ ಸೆಳೆಯಲು ಬಯಸುತ್ತೇನೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಸಚಿವರು).— ನಾನು ಈ ಕೆಳಗಿನ ಹೇಳಿಕೆಯನ್ನು ಮಾಡ ಬಯಸುತ್ತೇನೆ.

ಪ್ರಾಥಮಿಕ ಆರೋಗ್ಯ ಕೇಂದ್ರ ಸುಳ್ಯ.

ಈ ಆರೋಗ್ಯ ಕೇಂದ್ರದ ನೂತನ ಕಟ್ಟಡವು ಮೇಲ್ಛಾವಣಿಯ ಮಟ್ಟಕ್ಕೆ ಬಂದಿದೆ ಕ್ಷ-ಕಿರಣ ಕೊಠಡಿಗೆ ದುರಸ್ತಿಯ ಅವಶ್ಯಕತೆಯಿದ್ದೂ ಅದಕ್ಕಾಗಿ ಲೋಕೋಪಯೋಗಿ ಇಲಾಖೆಯವರಲ್ಲಿ ವಿನಂತಿ ಮಾಡಲಾಗಿದೆ. ಈ ಕೆಳಕಂಡ ಸಿಬ್ಬಂದಿ ಸ್ಥಾನಗಳು ಖಾಲಿ ಇವೆ.

ಅ)	ವೈದ್ಯಾಧಿಕಾರಿಗಳು	೨
ಆ)	ಆರೋಗ್ಯ ಕಾರ್ಯಕರ್ತರು (ಪು)	೩
ಇ)	ಆರೋಗ್ಯ ಕಾರ್ಯಕರ್ತರು (ಮಂ)	೨
ಈ)	ಸೂಕ್ಷ್ಮದರ್ಶಿ	೧
ಉ)	ಕ್ಷೇತ್ರ ಅ. ಶಿ. ಅಧಿಕಾರಿ	೧
ಊ)	ನಾಲ್ಕನೇ ದರ್ಜೆ ನೌಕರರು	೩

ಪ್ರಾಥಮಿಕ ಆರೋಗ್ಯ ಕೇಂದ್ರ ಕೊಲ್ಲಮೊಗ್ರು.

ಈ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡ ನಿರ್ಮಾಣಕ್ಕಾಗಿ ಅಂದಾಜು ಪಟ್ಟಿ ಮೊತ್ತ ರೂ. ೧೧ ೫೦ ಲಕ್ಷಗಳಿಗೆ ಮತ್ತು ನಕ್ಷೆಗಳಿಗೆ ಸರ್ಕಾರದ ಆಡಳಿತ ಮಂಜೂರಾತಿಯು ಸರ್ಕಾರಿ ಆದೇಶದ ಸಂಖ್ಯೆ ಆಕಾಂ ೮೦ ಸಿಜಿಎಸ್ ೮೬ ದಿನಾಂಕ ೨೦-೮-೮೬ರಲ್ಲಿ ಕೊಡಲಾಗಿದೆ. ಈ ಕೆಳಕಂಡ ಸಿಬ್ಬಂದಿ ಸ್ಥಾನಗಳು ಖಾಲಿ ಇವೆ.

ಅ)	ವೈದ್ಯಾಧಿಕಾರಿ	೧
ಆ)	ಮಹಿಳಾ ಆರೋಗ್ಯ ಕಾರ್ಯಕರ್ತೆ	೧
ಇ)	ಪ್ರಥಮ ದರ್ಜೆ ಗುಮಾಸ್ತ	೧
ಈ)	ಸೂಕ್ಷ್ಮದರ್ಶಿ	೧
ಉ)	ನಾಲ್ಕನೆ ದರ್ಜೆ ನೌಕರ	೧

ಸಂಚಾರಿ ಆರೋಗ್ಯ ಘಟಕ, ಸುಳ್ಯ.

ಆರೋಗ್ಯ ಕಾರ್ಯಕರ್ತ ಸ್ಥಾನ—೧ ಖಾಲಿ ಇದೆ.